

PRATHAM BOOKS

ಹಂತ ೨

# ನಗು ತಡೆಯದ ಸುಂದರಿ

**Author:** Meera Ganapathi
**Illustrator:** ROSH
**Translator:** Smitha sathyaprakash



ಮ್‌ಮ್... **ಹ್ಹ.ಹ್ಹ.ಹ್ಹ.ಹ್ಹ**

**ಹೋ.ಹೋ.ಹೋ.ಹೋ**

ನಾಲ್ಕನೇ ಬಿ ಕ್ಲಾಸಿನಲ್ಲಿ ನಗೆಬಾಂಬೊಂದು ಇದ್ದಕ್ಕಿದ್ದಂತೆ ಸ್ಫೋಟಗೊಂಡಿತು.

ಆದರೆ ಈ ನಗೆಬಾಂಬ್ ಯಾರು ಸಿಡಿಸಿದ್ದು ಎಂದು ಗಣಿತದ ಟೀಚರ್ ಗುಂಡಪ್ಪಗೆ ಚೆನ್ನಾಗಿ ಗೊತ್ತು.



“ಟಿ. ಸುಂದರಿ, ಕ್ಲಾಸಿನಿಂದ ಹೋಗಾಚೆಗೆ,” ಎಂದು ಗದರಿದರು ಗುಂಡಪ್ಪ ಟೀಚರ್.

ಮಕ್ಕಳೆಲ್ಲ ಸದ್ದಿಲ್ಲದೆ 5ನೇ ಬೆಂಚ್‌ನಲ್ಲಿ ಕುಳಿತಿದ್ದ ಟಿ. ಸುಂದರಿ ಕಡೆ ತಿರುಗಿ ನೋಡಿದರು.




“ಆದರೆ ನಾನೇನು ಮಾಡಲಿ ಸರ್! ಅದೆಷ್ಟು ತಡೆದರೂ ನಗು ಬಂದೇ ಬಿಟ್ಟಿತು!”

ನಾಲ್ಕನೇ ಬಿ ಕ್ಲಾಸಿನಲ್ಲಿ ಮಕ್ಕಳೆಲ್ಲ ಮತ್ತೆ ಗೊಳ್ ಎಂದು ನಕ್ಕರು.



ಟಿ. ಸುಂದರಿಯೇ ಹಾಗೇ ಸುಮ್ಮಸುಮ್ಮನೆ ನಗುವಳು.
ಅವಳು ಏನು ಹೇಳಿದರೂ, ಎಲ್ಲದಕ್ಕೂ ನಗುತ್ತಿದ್ದಳು.



ಉದಾಹರಣೆಗೆ, ಕಳೆದ ವಾರ ಸಹಪಾಠಿಯೊಬ್ಬ ಟಿ. ಸುಂದರಿ ಮುಂದೆ ನಗೆ ಚಟಾಕಿ ಹಾರಿಸಿದ:

ಪ್ರಶ್ನೆ: ಗಣಿತದ ಟೀಚರ್ ಯಾವಾಗಲೂ ಏಕೆ ಬೇಸರದಿಂದ ಇರುವಂತೆ ಕಾಣುತ್ತಾರೆ?

ಉತ್ತರ: ಏಕೆಂದರೆ ಅವರು ಗಣಿತದ ಅನೇಕ ಲೆಕ್ಕ ಬಿಡಿಸಬೇಕಿರುವುದರಿಂದ.

ಇದನ್ನು ಕೇಳುತ್ತಿದ್ದ  ಟಿ. ಸುಂದರಿಓರೆಕಣ್ಣು ಮಾಡಿ, ಕಿಲಕಿಲನೇ ನಕ್ಕಳು. ಅವಳಿಂದಾಗಿ ಗುಂಡಪ್ಪ ಸರ್ ಕಂಡೊಡನೆ ಇಡೀ ಕ್ಲಾಸಿಗೇ ನಗು ಉಕ್ಕಿ ಬಂತು.

ಪ್ರತಿ ನಗೆಚಟಾಕಿಗೂ ಟಿ. ಸುಂದರಿ
ಹೇಗೆ ಹೇಗೊ ನಗುತ್ತಾಳೆ.



ಕೆಲವೊಮ್ಮೆ

**ಹ್ಹಾ ಹ್ಹಾ ಹ್ಹಾ ಹ್ಹಾ ಹ್ಹಾ**



ಇನ್ನೂ ಕೆಲವೊಮ್ಮೆ
ಪಿಹ್ಹೀಹ್ಹೀ ಹ್ಹೀ ಹ್ಹೀ



ಆಗಾಗ ಸಣ್ಣಗೆ
ಹಹ್ಹಾ **ಹಹ್ಹಾ** ಹಹ್ಹಾ

ಮತ್ತೊಮ್ಮೆ ಘಟೋತ್ಕಚನಂತೆ

**ಆಹ್ಹಾಆಹ್ಹಾಆಹ್ಹಾಆಹ್ಹಾಆಹ್ಹಾ**

ಕೆಲವು ಸಾರಿ ಟಿ. ಸುಂದರಿ ಎಷ್ಟೇ ನಗು ತಡೆದರೂ ಕಡೆಗೆ ಬಾಂಬ್ ಸ್ಫೋಟಿಸಿದಂತೆ ಜೋರಾಗಿ ಸಿಡಿಯುತ್ತದೆ.



*ಮಹಾಭಾರತದಲ್ಲಿ ಘಟೋದ್ಗಚ, ಅಟ್ಟಹಾಸದಿಂದ, ಘರ್ಜಿಸಿ ನಗುವ ಬ್ರಹ್ಮರಾಕ್ಷಸ.

ಆದರೀಗ ಟಿ. ಸುಂದರಿಗೆ ಚಿಂತೆಯಾಗಿದೆ. ಅವಳ ಸಮಸ್ಯೆ ಏನು? ಅವಳಿಗೇಕೆ ನಗು ತಡೆಯಲು ಆಗುವುದಿಲ್ಲ. ಈ ನಗು ನಿಲ್ಲಿಸಲು ಏನಾದರೂ ಮಾಡಲೇಬೇಕಿದೆ.

ಅವಳು ಕರ್ಚೀಫ್‌ನಿಂದ ಬಿಗಿಯಾಗಿ ಬಾಯಿ ಮುಚ್ಚಿಕೊಂಡರೂ ಅವಳ ಬಾಯಿಂದ ನಗು ಸಿಡಿದೇ ಬಿಡುತ್ತಿತ್ತು.



ಟಿ. ಸುಂದರಿಯು ತನಗೆ ನಗು ತರಿಸುವ ಕೆಲವು ವಿಷಯಗಳನ್ನು ಪಟ್ಟಿ ಮಾಡಿದ್ದಾಳೆ. ಅವುಗಳೆಂದರೆ:




3.ಬೋಂಡಾ ಎನ್ನುವ ಪದ



2. ಟಾಯ್ಲೆಟ್ ಜೋಕ್‌ಗಳು



1. ಹೂಸಿನ ಸದ್ದು

5. ಕಚಗುಳಿ ಇಟ್ಟಾಗ



4. ಬಾಳೆ ಹಣ್ಣಿನ ಸಿಪ್ಪೆ ಮೇಲೆ ಕಾಲಿಟ್ಟು ಜಾರಿ ಬೀಳುವವರನ್ನು ಕಂಡಾಗ



“ಈ ಮೇಲಿನ ವಿಷಯಗಳಿಗೆ ಇನ್ನು ಮುಂದೆ
ಯಾವುದೇ ಕಾರಣಕ್ಕೂ ನಗಬಾರದು,” ಎಂದು
ಗಟ್ಟಿ ಮನಸು ಮಾಡಿದಳು ಟಿ. ಸುಂದರಿ.





ಪುಟ್ ಪುಟ್ **ಪುರ್ರ್ರ್ರ್ರ್ರ್**

ಮರುದಿನ ಟಿ. ಸುಂದರಿ
ಗ್ರಂಥಾಲಯದಲ್ಲಿದ್ದಾಗ
ಪಿ.ಮಣಿಕಂಠನ್ ಪುಸ್ತಕ ಕಪಾಟಿನ
ಹಿಂಭಾಗಕ್ಕೆ ಬಂದು ತಡೆದು ತಡೆದು
ಮೆಲ್ಲಗೆ ಪುಟ್ ಪುಟ್
ಪುರ್ ರ್ ರ್ ರ್ ರ್ ರ್ ಎಂದು
ಹೂಸು ಬಿಟ್ಟನು.

ಆಗ ಅಲ್ಲೇ ಹತ್ತಿರದಲ್ಲೇ ಇದ್ದ
ಟಿ. ಸುಂದರಿ ಈ ಶಬ್ದ ಕೇಳಿ, ತಾನು
ಪಟ್ಟಿ ಮಾಡಿದ್ದ ಸಂಗತಿ ಮರೆತು
ಬಿದ್ದು ಬಿದ್ದು ನಗಲಾರಂಭಿಸಿದಳು!

ಹಾಗಾಗಿ, ಟಿ. ಸುಂದರಿಯ
ಮೊದಲ ಯೋಜನೆ ಕೈಗೂಡಲಿಲ್ಲ.
ಈಗ ಮತ್ತೇನಾದರೂ ಉಪಾಯ
ಮಾಡಲೇಬೇಕು.



ಟಿ. ಸುಂದರಿಯ ಹಿರಿಯ ಅಣ್ಣ ಸ್ಕಂದು ಒಬ್ಬ ವಿಜ್ಞಾನಿ.

ಅಣ್ಣ ಅವಳ ನಗು ತಡೆಗೆ ಯಾವುದಾದರೂ ಯಂತ್ರ ಕಂಡು ಹಿಡಿಯಬಹುದಾ?

ಟಿ. ಸುಂದರಿ ಅಣ್ಣನಿಗೆ ತನ್ನ ನಗುವಿನ ಬಗೆಯನ್ನು ವಿವರಿಸಿದಳು. ಸಾಮಾನ್ಯವಾಗಿ ಯಾವಾಗಲೂ ಗಂಭೀರದಿಂದ ಇರುತ್ತಿದ್ದ ಸ್ಕಂದು, ಟಿ. ಸುಂದರಿ ಹೇಳಿದ್ದನ್ನು ಕೇಳಿ ಕೇಕೆ ಹಾಕಿ ನಕ್ಕುಬಿಟ್ಟ.

ಇದನ್ನು ಕಂಡ ಟಿ. ಸುಂದರಿ ಒಮ್ಮೆ ಬೆರಗಾಗಿ, ಬಹುಶಃ ಇದು ನಮ್ಮ ಕುಟುಂಬದ ಸಮಸ್ಯೆಯೇ ಇರಬೇಕು. ಎಲ್ಲರಿಗೂ ನಗುವ ಕಾಯಿಲೆ ಇರಬಹುದಾ? ಎಂದು ಚಕಿತಳಾದಳು.

ಅದು ಹಾಗಲ್ಲವೇ ಎಂದು ಸ್ಕಂದು ಸಮಾಧಾನವಾಗಿ ವಿವರಿಸಿದ.

"ಟಿ. ಸುಂದರಿ, ತಮಾಷೆಯಾಗಿರುವುದನ್ನು ಕಂಡಾಗ ನಗುವುದು ಮನುಷ್ಯನ ಸಹಜಗುಣ. ಆದರೆ ಕೆಲವರು ಇತರರಿಗಿಂತ ಸ್ವಲ್ಪ ಹೆಚ್ಚಾಗಿಯೇ ನಗುತ್ತಾರೆ. ಇದರಲ್ಲಿ ತೊಂದರೆ ಏನಿಲ್ಲ."






ನಿಜವಾಗಿಯೂ? ಎಂದು ಕೇಳಿದಳು ಟಿ. ಸುಂದರಿ. ಏಕೆಂದರೆ ಅವಳಿಗೆ ಎಲ್ಲರೂ ನೀನು ತುಂಬಾ ನಗುತ್ತೀಯ ಎಂದೇ ಹೇಳುತ್ತಿದ್ದರು.

ಸ್ಕಂದು ಅಣ್ಣ ಮುಂದುವರಿಸಿ, “ಹೌದು, ನಗುವುದು ಆರೋಗ್ಯಕ್ಕೆ ಒಳ್ಳೆಯದು. ನಕ್ಕಾಗ ದೇಹದಲ್ಲಿ ಉತ್ಪತ್ತಿಯಾಗುವ ನಗು ಹಾರ್ಮೋನು ನಮಗೆ ಸಂತೋಷವನ್ನು ಉಂಟು ಮಾಡುತ್ತದೆ.”

“ನಿನಗೆ ಗೊತ್ತ? ಆದಿಮಾನವರು ಕೂಡ ನಗುತ್ತಿದ್ದರು,” ಎಂದ ಸ್ಕಂದು ಅಣ್ಣ. ಚಿತ್ರಕಲೆ ಕ್ಲಾಸಿನಲ್ಲಿ ಟಿ. ಸುಂದರಿ ದಪ್ಪ ಗಡ್ಡದ ಮಾನವನೊಬ್ಬ ಇವಳಂತೆಯೇ ನಗುತ್ತಿರುವ ಹಾಗೆ ಕಲ್ಪಿಸಿಕೊಂಡಳು.

“ಹೌದು, ಬಹಳ ಹಿಂದೆ ಮಾನವರ ಪೂರ್ವಜರು ಭಾಷೆಯನ್ನು ಬಳಸುವುದಕ್ಕಿಂತ ಮೊದಲು ನಗುತ್ತಿದ್ದರು. ಯಾವುದೇ ಸಮಸ್ಯೆ ಇಲ್ಲ ಎಂದು ಒಬ್ಬರಿಗೊಬ್ಬರಿಗೆ ತಿಳಿಸಲು ಅವರು ನಗುವ ಮಾರ್ಗವನ್ನೇ ಕಂಡುಕೊಂಡಿದ್ದರು ಎಂದು ವಿವರಿಸಿದ.”





“ಆದರೀಗ ನಾವು ಮತ್ತೊಬ್ಬರನ್ನು ಇಷ್ಟ ಪಡುತ್ತೇವೆಂದು ತಿಳಿಸಲು ಅಥವಾ ನಮ್ಮ ಸಂತೋಷವನ್ನು ವ್ಯಕ್ತಪಡಿಸಲು ನಗುತ್ತೇವೆ. ಕೆಲವು ಜಾತಿಯ ಪ್ರಾಣಿಗಳೂ ಕೂಡ ನಗುತ್ತವೆ ಟಿ. ಸುಂದರಿ.”



“ಅವುಗಳೆಂದರೆ ಚಿಂಪಾಜಿ, ಬೋನೊಬಾಸ್ (ಚಿಂಪಾಜಿ ಜಾತಿಗೆ ಸೇರಿದ ಪ್ರಾಣಿ), ಇಲಿಗಳು, ಡಾಲ್ಫಿನ್ ಹಾಗೂ ಕೆಲವು ಜಾತಿಯ ನಾಯಿಗಳು!” ಎಂದ ಸ್ಕಂದು ಅಣ್ಣ.

ಕೂಡಲೇ ಅವಳ ಪ್ರೀತಿಯ ನಾಯಿ ಮುತ್ತು ನಗುತ್ತಿರುವ ಹಾಗೇ ಕಲ್ಪಿಸಿಕೊಂಡು ಜೋರಾಗಿ ನಕ್ಕಳು.







ಅಂತೂ ಅವಳು ನಗು ನಿಲ್ಲಿಸಿದಾಗ ಅಣ್ಣ ಹೇಳಿದ, “ಇದುವರೆಗೂ ನೀನು ವ್ಯಾಯಾಮ ಮಾಡಿದಂತಾಯಿತು ಎನ್ನುವುದು ನಿನಗೆ ಗೊತ್ತ ಟಿ. ಸುಂದರಿ?”

“ಅದು ಹೇಗೆ ಅಣ್ಣ?” ಇಷ್ಟು ಹೊತ್ತಿನಿಂದ ಹರಟೆ ಹೊಡೆಯುತ್ತಿದ್ದೆವಲ್ಲ.”

“ನಾವು ಪ್ರತಿ ಬಾರಿ ನಕ್ಕಾಗ ಕೆನ್ನೆಯ ಸ್ನಾಯುಗಳು ಹಿಗ್ಗಿ, ಕುಗ್ಗುತ್ತವೆ ಹಾಗಾಗಿ ನಗುವುದು ಮುಖಕ್ಕೆ ವ್ಯಾಯಾಮ ಮಾಡಿದಂತೆ,” ಎಂದು ಅಣ್ಣ ತಿಳಿಸಿದ.

“ಓಹ್ ಹೌದಾ! ಹಾಗಾದರೆ ನನ್ನ ಕೆನ್ನೆಗಳು ರಟ್ಟೆಯ ಹಾಗೇ ಉಬ್ಬಿಕೊಳ್ಳುತ್ತವೆಯೇ?” ಎಂದು ಕೇಳಿದಳು ಟಿ. ಸುಂದರಿ.



ಅಣ್ಣ ನಕ್ಕು, “ಅಲ್ಲ, ಆದರೆ ನೀನು ನಕ್ಕಾಗ ಮುಖಭಾವವನ್ನು ತಿಳಿಸಲು ನಿನ್ನ ಕೆನ್ನೆಯಲ್ಲಿರುವ ಪ್ರಮುಖ ಹಾಗೂ ಸಣ್ಣ ಸ್ನಾಯುಗಳು ಹಿಗ್ಗಿ, ಕುಗ್ಗುತ್ತವೆ.

ಆದರೆ ನಗುವಾಗ ಹೊಮ್ಮುವ ಶಬ್ದ ಯಾವುದು? ಅದು ಇತರರನ್ನೂ ನಗುವಂತೆ ಮಾಡುತ್ತದಲ್ಲ,” ಎಂದಳು ಟಿ. ಸುಂದರಿ.

“ನೀನು ಉಸಿರಾಡಿದಾಗ ಗಾಳಿಯು ಧ್ವನಿತಂತುಗಳ ಮೂಲಕ ಶ್ವಾಸಕೋಶದೊಳಗೆ ಹಾದು ಹೋಗುತ್ತದೆ. ಆದರೆ ನೀನು ನಗುವಾಗ ಗಾಳಿಯು ಹಿಂಬಾಲಿಸಿಕೊಂಡು ಬರುವುದರಿಂದ ಶಬ್ದವು ಲಯಬದ್ಧವಾಗಿ
ಹ್ಹ ಹ್ಹ ಹ್ಹ ಎಂದು ಹೊರ ಹೊಮ್ಮತ್ತದೆ ಹಾಗು ಕೂಡಲೇ ಅದು ನಿಲ್ಲುವುದೂ ಇಲ್ಲ,” ಎಂದು ಅಣ್ಣ ವಿವರಿಸಿದ.



“ಈಗಲಾದರೂ ನಗುವುದು ಸಹಜ ಭಾವನೆ ಎನ್ನುವುದು ನಿನಗೆ ಅರ್ಥವಾಯಿತೆ? ನಿನ್ನ ನಗು ಯಾರನ್ನೂ ನೋಯಿಸುವಂತೆ ಇರಬಾರದು ಅಲ್ವ ಟಿ. ಸುಂದರಿ.” ಎಂದ ಅಣ್ಣ.

ಟಿ. ಸುಂದರಿಗೆ ಎಷ್ಟೋ ಸಮಾಧಾನವಾಯಿತು.





“ಇದೀಗ ಚಹಾ ಹೀರುವ ಸಮಯ, ಜತೆಗೆ ಬೋಂಡಾ ತಿನ್ನೋಣವೇ ಎಂದು ಸ್ಕಂದು ಅಣ್ಣ ಟಿ. ಸುಂದರಿಯನ್ನು ಕೇಳಿದ. ಮುಂದೆ ಏನಾಗುತ್ತದೆ ಎಂದು ಅವನಿಗೂ ಗೊತ್ತಿತ್ತು.

ಟಿ. ಸುಂದರಿಯ ಕಿಲಕಿಲ ನಗು ನಿಲ್ಲಲೇ ಇಲ್ಲ. ಬೋಂಡಾ ಅವಳ ಹೊಟ್ಟೆ ಸೇರಿದ ನಂತರವೂ!



## ನಿಮಗೂ ಹೀಗೆಲ್ಲಾ ನಗಲು ಸಾಧ್ಯವೇ?

ಘಟೋತ್ಕಜ - **ಊ ಹಹಾ...ಹಹಾ...ಹಹಾ**

ಬಾಂಬ್ ನಗೆ - **ಓ ಹೊಹ್ಹೊ ಹೊಹ್ಹೊ**

ಮೆಲು ನಗೆ - **ಎಹೆಹೆಹೆಹೆಹೆ**



ಗಂಟಲು ನಗೆ - **ಗಳಗಳಗಳಗಳ**

ಕಿಸಿ ಕಿಸಿ ನಗು – **ಹ್ವಿ ಹ್ವಿ ಹ್ವಿ ಹ್ವಿ**

ಸುಳ್ಳು ನಗೆ - **ಈ ಹಿಹೀ ಹಿಹೀ**

PRATHAM BOOKS storyweaver

This book was made possible by Pratham Books' StoryWeaver platform. Content under Creative Commons licenses can be downloaded, translated and can even be used to create new stories - provided you give appropriate credit, and indicate if changes were made. To know more about this, and the full terms of use and attribution, please visit the following link.

## Story Attribution:

This story: ನಗು ತಡೆಯದ ಸುಂದರಿ is translated by Smitha sathyaprakash . The © for this translation lies with Pratham Books, 2019. Some rights reserved. Released under CC BY 4.0 license. Based on Original story: 'The Girl Who Could Not Stop Laughing', by Meera Ganapathi . © Pratham Books , 2019. Some rights reserved. Released under CC BY 4.0 license.

## Other Credits:

'Nagu Thadeyada Sundari' has been published by Pratham Books. The development of this book has been supported by CISCO. www.prathambooks.org. Guest Editor: Padmaparna Ghosh; Guest Art Director: Sumedha Sah.

## Images Attributions:

Cover page: Girl laughing at her food, by ROSH © Pratham Books, 2019. Some rights reserved. Released under CC BY 4.0 license. Page 2: Teacher with students in a classroom, by ROSH © Pratham Books, 2019. Some rights reserved. Released under CC BY 4.0 license. Page 3: Student standing in a classroom, by ROSH © Pratham Books, 2019. Some rights reserved. Released under CC BY 4.0 license. Page 4: Angry man and a school girl , by ROSH © Pratham Books, 2019. Some rights reserved. Released under CC BY 4.0 license. Page 5: Girl laughing , by ROSH © Pratham Books, 2019. Some rights reserved. Released under CC BY 4.0 license. Page 6: Two children swinging on a gate, by ROSH © Pratham Books, 2019. Some rights reserved. Released under CC BY 4.0 license. Page 7: Laughing girl, by ROSH © Pratham Books, 2019. Some rights reserved. Released under CC BY 4.0 license. Page 8: Girl laughing and pointing at something, by ROSH © Pratham Books, 2019. Some rights reserved. Released under CC BY 4.0 license. Page 9: Girl in shock, by ROSH © Pratham Books, 2019. Some rights reserved. Released under CC BY 4.0 license. Page 10: Series of activities, by ROSH © Pratham Books, 2019. Some rights reserved. Released under CC BY 4.0 license.

Disclaimer: https://www.storyweaver.org.in/terms_and_conditions

CC BY

Some rights reserved. This book is CC-BY-4.0 licensed. You can copy, modify, distribute and perform the work, even for commercial purposes, all without asking permission. For full terms of use and attribution, http://creativecommons.org/licenses/by/4.0/

CISCO A Corporate Social Responsibility Initiative

The development of this book has been supported by CISCO.

PRATHAM BOOKS storyweaver

This book was made possible by Pratham Books' StoryWeaver platform. Content under Creative Commons licenses can be downloaded, translated and can even be used to create new stories - provided you give appropriate credit, and indicate if changes were made. To know more about this, and the full terms of use and attribution, please visit the following link.

## Images Attributions:

Page 11: Girl working at her table, by ROSH © Pratham Books, 2019. Some rights reserved. Released under CC BY 4.0 license. Page 12: Boy and girl reading, by ROSH © Pratham Books, 2019. Some rights reserved. Released under CC BY 4.0 license. Page 13: A girl and a man in a lab, by ROSH © Pratham Books, 2019. Some rights reserved. Released under CC BY 4.0 license. Page 14: Man putting on a coat, by ROSH © Pratham Books, 2019. Some rights reserved. Released under CC BY 4.0 license. Page 15: Girl looking at a poster, by ROSH © Pratham Books, 2019. Some rights reserved. Released under CC BY 4.0 license. Page 16: Two men laughing at a primitive looking vehicle , by ROSH © Pratham Books, 2019. Some rights reserved. Released under CC BY 4.0 license. Page 17: Group of laughing animals, by ROSH © Pratham Books, 2019. Some rights reserved. Released under CC BY 4.0 license. Page 18: Man and little girl reading a book, by ROSH © Pratham Books, 2019. Some rights reserved. Released under CC BY 4.0 license. Page 19: different kinds of laughter backdrop, by ROSH © Pratham Books, 2019. Some rights reserved. Released under CC BY 4.0 license. Page 20: Man carrying a girl piggyback, by ROSH © Pratham Books, 2019. Some rights reserved. Released under CC BY 4.0 license. Page 21: Man and a girl talking about food, by ROSH © Pratham Books, 2019. Some rights reserved. Released under CC BY 4.0 license. Page 22: Girl wiggling with laughter, by ROSH © Pratham Books, 2019. Some rights reserved. Released under CC BY 4.0 license.

Disclaimer: https://www.storyweaver.org.in/terms_and_conditions

Some rights reserved. This book is CC-BY-4.0 licensed. You can copy, modify, distribute and perform the work, even for commercial purposes, all without asking permission. For full terms of use and attribution, http://creativecommons.org/licenses/by/4.0/

CISCO A Corporate Social Responsibility Initiative

The development of this book has been supported by CISCO.

# ನಗು ತಡೆಯದ ಸುಂದರಿ

(Kannada)

ಟಿ. ಸುಂದರಿಗೆ ಪ್ರತಿಯೊಂದಕ್ಕೂ ನಗು ಬರುತ್ತದೆ. ಹಾಗೆ ನಗು ಬಂದಾಗಲೆಲ್ಲ ಅವಳಿಗೆ ಬಾಯಿ ಮುಚ್ಚಿಕೊಂಡಿರುವುದು ಸಾಧ್ಯವೇ ಇಲ್ಲ. ಹಾಗಾದರೆ ಟಿ. ಸುಂದರಿಗೆ ನಗುವುದೊಂದು ಸಮಸ್ಯೆಯೇ?. ಏಕೆಂದರೆ, ಸಮಸ್ಯೆ ಇಲ್ಲ ಎಂದರೆ ಯಾವಾಗಲೂ ಅವಳು ನಗುತ್ತಲೇ ಇರಬಹುದಲ್ಲ!

ಇದು ಮೂರನೆ ಹಂತದ ಪುಸ್ತಕ. ತಾವಾಗಿಯೆ ಓದಲು ಸಿದ್ಧವಿರುವ ಮಕ್ಕಳಿಗಾಗಿ.

PRATHAM BOOKS
storyweaver

Pratham Books goes digital to weave a whole new chapter in the realm of multilingual children's stories. Knitting together children, authors, illustrators and publishers. Folding in teachers, and translators. To create a rich fabric of openly licensed multilingual stories for the children of India and the world. Our unique online platform, StoryWeaver, is a playground where children, parents, teachers and librarians can get creative. Come, start weaving today, and help us get a book in every child's hand!